ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಶಿಅ/ಹ.ಹ.ಜಾ.ಶಿ/ಕಿಶೋರಿ/2013-14 ದಿನಾಂಕ: 16.07.2013

# ಸುತ್ತೋಲೆ

ವಿಷಯ:2013-14ನೇ ಸಾಲಿನಲ್ಲಿ ಹದಿಹರೆಯದ ಹೆಣ್ಣು ಮಕ್ಕಳ ಜಾಗೃತಿ ಶಿಬಿರ (ಕಿಶೋರಿ) ಕಾರ್ಯಕ್ರಮವನ್ನು ಶಾಲಾ ಹಂತದಲ್ಲಿ ನಡೆಸುವ ಬಗ್ಗೆ
ಉಲ್ಲೇಖ: 2013-14 ನೇ ಸಾಲಿನ ಪಿ.ಎ.ಬಿ ನಡವಳಿ

-----

**2013-14ನೇ ಸಾಲಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣದಡಿಯಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಕಾರ್ಯಕ್ರಮಕ್ಕೆ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ**. 2013-14 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳಲ್ಲಿ ಓದುತ್ತಿರುವ 6, 7 ಮತ್ತು 8ನೇ ತರಗತಿಗಳ ಎಲ್ಲಾ ಹೆಣ್ಣುಮಕ್ಕಳಿಗೆ ಕಿಶೋರಿ ಕಾರ್ಯಕ್ರಮವನ್ನು ನಡೆಸುವ ಉದ್ದೇಶದಿಂದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು 2012-13ನೇ ಸಾಲಿನಂತೆಯೇ ಈ ಬಾರಿಯೂ ಶಾಲಾ ಅವಧಿಯಲ್ಲಿ ನಡೆಸುವುದು.

- ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು ಶಾಲಾ ಹಂತದಲ್ಲಿ ನಡೆಸಲು ಪೂರಕವಾಗಿ 2012-13ನೇ ಸಾಲಿನಲ್ಲಿ ಎಲ್ಲಾ ಶಾಲೆಗಳಿಗೂ **ಕಿಶೋರಿ ತರಬೇತಿ ಸಾಹಿತ್ಯ** ಮತ್ತು **ಕ್ಯಾಲೆಂಡರ್** ಗಳನ್ನು ಸರಬರಾಜು ಮಾಡಲಾಗಿದೆ. ಇವುಗಳ ಪ್ರಯೋಜನವನ್ನು ಶಾಲೆಗಳಲ್ಲಿ ಮಾಡಿಕೊಳ್ಳುವುದು.
- ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳು ಉತ್ತಮವಾಗಿ ಜರುಗುತ್ತಿದ್ದು, ಈ ಸಾಲಿನಲ್ಲಿಯೂ ಉತ್ತಮವಾಗಿ ನಡೆಸಲು ತಿಳಿಸಿದೆ. ಅನುಬಂಧ-1ರಂತೆ ಶಿಬಿರಗಳನ್ನು ನಡೆಸಲು ಅಗತ್ಯವಾದ ಮಾರ್ಗಸೂಚಿಯನ್ನು ಅನುಬಂಧ-2 ರಲ್ಲಿ ನೀಡಿದ್ದು, ಅದರಂತೆ ಶಿಬಿರಗಳನ್ನು ಸೆಪ್ಟೆಂಬರ್ 2013 ರೊಳಗೆ ಪೂರೈಸಿ, ಈ ಕಛೇರಿಗೆ ವರದಿ ಮಾಡಲು ಸೂಚಿಸಿದೆ.
- ಶಿಬಿರಗಳನ್ನು ನಡೆಸುವುದಕ್ಕೆ ಮುಂಚೆ ಬ್ಲಾಕ್‌ಗಳಿಂದ ಶಿಬಿರಗಳ ವೇಳಾಪಟ್ಟಿ ಹಾಗೂ ಫಲಾನುಭವಿಗಳ ಪಟ್ಟಿಯನ್ನು ಪಡೆಯಲು ತಿಳಿಸಿದೆ.
- ಶಿಬಿರಗಳು ಮುಕ್ತಾಯವಾದ ನಂತರ ಪ್ರತಿ ಶಿಬಿರದ ಕನಿಷ್ಠ ಒಂದು ಫೋಟೋ ಒಳಗೊಂಡ ದಾಖಲೀಕರಣವನ್ನು (ಕಿಶೋರಿಯರ ಹಿಮ್ಮಾಹಿತಿ ಸಹಿತ) ಜಿಲ್ಲೆಗಳು ಬ್ಲಾಕ್‌ಗಳಿಂದ ಪಡೆಯುವುದು ಹಾಗೂ ಕ್ರೋಢೀಕೃತ ವರದಿಯನ್ನು (ಉತ್ತಮ ಫೋಟೋಗಳ ಸಹಿತ) ಈ ಕಛೇರಿಗೆ ಅಕ್ಟೋಬರ್ 2013 ರ ಅಂತ್ಯದೊಳಗೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಪ್ರತಿಗಳು

1. ಎಲ್ಲಾ ಡಿ.ಡಿ.ಪಿ.ಐ., ಡಿವೈಪಿಸಿ., ಗಳಿಗೆ ಅಗತ್ಯ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ಅನುಪಾಲನೆಗಾಗಿ ಕಳುಹಿಸಿದೆ.

**ಇವರಿಗೆ ಮಾಹಿತಿಗೆ ಸಲ್ಲಿಸಿದೆ :**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA

ಸರ್ವ ಶಿಕ್ಷಣ ಅಭಿಯಾನ

# ಅನುಬಂಧ-1

## 2013-14 ನೇ ಸಾಲಿನಲ್ಲಿ 'ಹದಿಹರೆಯದ ಹೆಣ್ಣು ಮಕ್ಕಳ ಜಾಗೃತಿ ಶಿಬಿರ' (ಕಿಶೋರಿ) ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿದ ಭೌತಿಕ ಗುರಿ

| Sl. No | District Name | Target for Kishori Training for 2013-14(6,7 & 8th std girls of GHPS) |
|---|---|---|
| 1 | BAGALKOT | 41132 |
| 2 | BANGALORE RURAL | 12803 |
| 3 | BANGALORE URBAN | 34813 |
| 4 | BELGAUM | 90367 |
| 5 | BELLARY | 45750 |
| 6 | BIDAR | 30967 |
| 7 | BIJAPUR | 51182 |
| 8 | CHAMARAJANAGARA | 14943 |
| 9 | CHIKKABALLAPURA | 17584 |
| 10 | CHIKKAMANGALORE | 15721 |
| 11 | CHITRADURGA | 28531 |
| 12 | DAKSHINA KANNADA | 21527 |
| 13 | DAVANAGERE | 29511 |
| 14 | DHARWAD | 28650 |
| 15 | GADAG | 20395 |
| 16 | GULBARGA | 47463 |
| 17 | HASSAN | 23453 |
| 18 | HAVERI | 31700 |
| 19 | KODAGU | 7057 |
| 20 | KOLAR | 21669 |
| 21 | KOPPAL | 32470 |
| 22 | MANDYA | 22783 |
| 23 | MYSORE | 37629 |
| 24 | RAICHUR | 40870 |
| 25 | RAMANAGARA | 14149 |
| 26 | SHIMOGA | 25594 |
| 27 | TUMKUR | 39221 |
| 28 | UDUPI | 10582 |
| 29 | UTTAR KANNADA | 25051 |
| 30 | YADGIRI | 23537 |
| | TOTAL | **887104** |

# ಅನುಬಂಧ–2

## 'ಹದಿಹರೆಯದ ಹೆಣ್ಣು ಮಕ್ಕಳ ಜಾಗೃತಿ ಶಿಬಿರ' (ಕಿಶೋರಿ) ಕಾರ್ಯಕ್ರಮ ಅನುಷ್ಠಾನಕ್ಕಾಗಿ ಮಾರ್ಗಸೂಚಿ

**2013–14ನೇ ಸಾಲಿನಲ್ಲಿ ಕೈಗೊಳ್ಳಲಿರುವ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರ ಕಾರ್ಯಕ್ರಮ (ಕಿಶೋರಿ)ದ ವೈಶಿಷ್ಟ್ಯಗಳು**

1. ಜಿಲ್ಲೆಯ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತ ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳಲ್ಲಿ (ಕೆ.ಜಿ.ಬಿ.ವಿ) ಓದುತ್ತಿರುವ 6, 7 ಮತ್ತು 8ನೇ ತರಗತಿಗಳ ಎಲ್ಲಾ ಹೆಣ್ಣುಮಕ್ಕಳಿಗೆ ಕಿಶೋರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಿದೆ.
2. ಪ್ರಸ್ತುತ ಸಾಲಿನಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರ ಕಾರ್ಯಕ್ರಮವನ್ನು (ಕಿಶೋರಿ) ಶಾಲಾ ಹಂತದಲ್ಲಿ ಯಾವುದೇ ಅನುದಾನದ ನೆರವಿಲ್ಲದೇ ನಡೆಸಬೇಕಾಗಿರುತ್ತದೆ.
3. 'ಕೇಳು ಕಿಶೋರಿ' ಹಾಗೂ 'ಭಯಪಡಬಾರದು' ಎಂಬ ಕಿಶೋರಿಯರಿಗೆ ಮಾಹಿತಿ ಪುಸ್ತಕಗಳನ್ನು ಮತ್ತು ತರಬೇತುದಾರರ ಅನುಕೂಲಕ್ಕಾಗಿ ತರಬೇತಿಯ ವಿಷಯಗಳಿಗೆ ಸಂಬಂಧಿಸಿದ 12 ಚಾರ್ಟುಗಳನ್ನು ಹೊಂದಿರುವ ಒಂದು 'ಕ್ಯಾಲೆಂಡರ್' ಮತ್ತು 'ಕಿಶೋರಿ' ತರಬೇತಿ ಸಾಹಿತ್ಯವನ್ನು ಪ್ರತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಒಂದು ಸೆಟ್‌ನಂತೆ ರಾಜ್ಯ ಹಂತದಿಂದ 2012–13ನೇ ಸಾಲಿನಲ್ಲಿ ಮುದ್ರಿಸಿ ಸರಬರಾಜು ಮಾಡಲಾಗಿರುತ್ತದೆ. ಈ ಪುಸ್ತಕಗಳನ್ನೇ ಕಿಶೋರಿಯರಿಗೆ ತರಬೇತಿ ನೀಡಲು ಬಳಸಿಕೊಳ್ಳುವುದು.
4. ತರಬೇತಿಯಲ್ಲಿ ಚರ್ಚಿಸುವ ವಿಷಯ ಹಾಗೂ ವಿಧಾನವು ಕಳೆದ ಸಾರಿಯಂತೆಯೇ ಇರುವುದು. ಕಳೆದ ಸಾರಿ ಕೈಗೊಂಡ ರೀತಿಯಲ್ಲಿ ಉದ್ಘಾಟನೆ, ಕಿಶೋರಿಯರ ಭಾಗವಹಿಸುವಿಕೆಯ ಮೂಲಕ ನಡೆಯಬೇಕು. ಉಪನ್ಯಾಸಗಳನ್ನು ನೀಡಬಾರದು. ಕಿಶೋರಿಯರು ಅವರ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡಬೇಕು.
5. ಶಾಲಾ ಹಂತದಲ್ಲಿ ನಡೆಯುವ ತರಬೇತಿಯ ಆಯೋಜನೆಯ ಜವಾಬ್ದಾರಿಯು ಆಯಾ ಕ್ಲಸ್ಟರ್‌ನ ಸಿ.ಆರ್.ಪಿಯದ್ದಾಗಿರುವುದು.
6. ತರಬೇತಿ ನಡೆಯುವ ಸ್ಥಳಗಳಿಗೆ ಡಿಡಿಪಿಐ., ಡಿ.ವೈ.ಪಿ.ಸಿ., ಡಯಟ್ ಪ್ರಾಂಶುಪಾಲರು, ಡಯಟ್‌ಗಳ ಬ್ಲಾಕ್ ನೋಡಲ್ ಅಧಿಕಾರಿಗಳು, ಎ.ಪಿ.ಸಿ., ಬಿ.ಇ.ಓ.ಗಳು ಭೇಟಿ ನೀಡಿ, ಅಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷಿತ ಮತ್ತು ಅನೂಕೂಲಕರ ವಾತಾವರಣ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು.
7. ಸ್ಥಳೀಯ ಮಹಿಳಾ ವೈದ್ಯರು/ಸ್ತ್ರೀರೋಗ ತಜ್ಞರನ್ನು ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತೊಡಗಿಸಿಕೊಳ್ಳಬೇಕು. ಈ ಸಂಬಂಧ, ಸಾಕಷ್ಟು ಮುಂಚೆ ಶಿಬಿರಗಳ ವೇಳಾಪಟ್ಟಿಯನ್ನು ಅವರಿಗೆ ನೀಡಿ, ಶಿಬಿರದಲ್ಲಿ ಭಾಗವಹಿಸಲು ಕೋರಿಕೊಳ್ಳಬೇಕು. ಆರೋಗ್ಯ ಇಲಾಖೆಯಲ್ಲೂ ಶಾಲಾ ಆರೋಗ್ಯ ಶಿಕ್ಷಣ ಎಂಬ ಕಾರ್ಯಕ್ರಮ ಇದ್ದು, ಆ ಕಾರ್ಯಕ್ರಮದ ಮೂಲಕ ಕಿಶೋರಿಯರಿಗೆ ಏಡ್ಸ್, ಋತುಸ್ರಾವ ಅವದಿಯ ಸ್ವಚ್ಛತೆ ಇತ್ಯಾದಿಗಳ ಬಗ್ಗೆ ಅಗತ್ಯ ಮಾಹಿತಿ ಒದಗಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ವೈದ್ಯರಿಂದ ಕಿಶೋರಿಯರಿಗೆ ಉಪನ್ಯಾಸ, ಸಂವಾದ, ಆಪ್ತಸಲಹೆಯನ್ನು ಕೊಡಿಸಬೇಕು.
8. ಶಿಬಿರಗಳ ಫೋಟೋ ಒಳಗೊಂಡ ಕಿಶೋರಿಯರ ಹಿಮ್ಮಾಹಿತಿ ಸಹಿತ ದಾಖಲೀಕರಣವನ್ನು ಮಾಡಬೇಕು. ಜಿಲ್ಲೆಗಳು ಬ್ಲಾಕ್‌ಗಳಿಂದ ಭೌತಿಕ ಪ್ರಗತಿ, ಶಿಬಿರಗಳ ಉಪಯುಕ್ತತೆಯ ಬಗ್ಗೆ ಕಿಶೋರಿಯರ ಹಿಮ್ಮಾಹಿತಿ ಹಾಗೂ ಉತ್ತಮ ಫೋಟೋಗಳನ್ನೊಳಗೊಂಡ ಕ್ರೋಢೀಕೃತ ವರದಿಯನ್ನು ರಾಜ್ಯ ಕಛೇರಿಗೆ ಅಕ್ಟೋಬರ್ 2013 ರ ಅಂತ್ಯದೊಳಗೆ ಸಲ್ಲಿಸುವುದು.
9. ಒಟ್ಟಿನಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳು ಹೆಣ್ಣುಮಕ್ಕಳಿಗೆ ಅಗತ್ಯವಾದ ಜಾಗೃತಿ ಮೂಡಿಸುವುದರ ಜೊತೆ ಅವರ ಸಬಲೀಕರಣಕ್ಕೂ ಕಾರಣವಾಗುವಂತೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ